 ಸಿಸಿ ನಂ.**1717/2021**

**ಚಾಸಾ-11**

**ಪ್ರಾಸಾ-9**

**ನಾಲ್ಕನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ ಎಂ ಎಫ್ ಸಿ ,**

**ಧಾರವಾಡ.**

**ಸಾಕ್ಷಿದಾರನ ಹೆಸರುಃ ಬಾಷಾಸಾಬ**

**ತಂದೆಯ ಹೆಸರುಃ ಸೈಯದಸಾಬ**

**ವಯಸ್ಸುಃ 48 ವರ್ಷ**

**ಉದ್ಯೋಗಃ ಖಾಸಗಿ ಕೆಲಸ**

**ವಾಸಸ್ಥಳಃ ಧಾರವಾಡ**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿ.24.09.2024**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ನನ್ನದು ಸಾಧನಕೇರಿ ಮಂಗಳಗಟ್ಟಿ ಕ್ರಾಸ ಹತ್ತಿರ ಮೊಬೈಲ ಅಂಗಡಿ ಇರುತ್ತದೆ. ಸುಮಾರು 6 ವರುಷದ ಹಿಂದೆ 3 ಮತ್ತು 4 ನೇ ಆರೋಪಿತರು ನನ್ನ ಅಂಗಡಿಗೆ ವಡಾಪೊನ ಸಿಮ್ ಖರೀದಿಸಲು ಬಂದಿದ್ದರು. ನಾನು ಸೂಕ್ತ ದಾಖಲೆಗಳನ್ನು ಪಡೆದುಕೊಂಡು ಅವರಿಗೆ ಸಿಮ್ ಕೊಟ್ಟಿರುತ್ತೇನೆ. ಅವರಿಗೆ ಕೊಟ್ಟ ಸಿಮ್ ನಂಬರ ನನಗೆ ನೆನಪಿಲ್ಲ. ಇದಾಗಿ 15 ದಿನದ ನಂತರ ಪೋಲಿಸರು ನನ್ನ ಅಂಗಡಿಗೆ ಬಂದರು. ಆಗ ನಾನು 3 ಮತ್ತು 4 ನೇ ಆರೋಪಿತರ ಕಡೆಯಿಂದ ಸೂಕ್ತ ದಾಖಲೆಗಳನ್ನು ಪಡೆದುಕೊಂಡು ಸಿಮ್ ನೀಡಿದ್ದೇನೆ ಎನ್ನುತ್ತಾರೆ. ನತಂರ ಠಾಣೆಯಲ್ಲಿ 1 ನೇ ಆರೋಪಿ ಪೊನ ಮಾಡಿ ತಾನು ಎಸ್ ಪಿ ಸಂಗೀತಾ ಹಾಗೂ ಗಿರಿಜಾ ಎನ್ನುವವರ ಚಿಕಿತ್ಸೆ ತಲಾ ರೂ.2000/- ನೀಡಬೆಕು ಎಂದು ಪೋಲಿಸ ತರಬೇತಿ ಅಬ್ಯರ್ಥಿಗಳಿಗೆ ಕರೆ ಮಾಡಿದ್ದರು ಎಂದು ಗೊತ್ತಾಯಿತು.

3 ನೇ ಆರೋಪಿ ಸಿಮ್ ಪಡೆದುಕೊಳ್ಳಲು ಸಲ್ಲಿಸಿದ ಅರ್ಜಿಯನ್ನು ಸಾಕ್ಷಿ ನೊಡಿ ಗುರುತಿಸಿದ್ದು ಅದನ್ನು ನಿಪಿ.**14** ಎಂದು ಗುರುತಿಸಲಾಯಿತು**.** ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿಯನ್ನು ನೊಡಿ ಗುರುತಿಸಿರುತ್ತಾರೆ. 4 ನೇ ಆರೋಪಿಯನ್ನು ನೊಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಃ ಆರೋಪಿ ಪರ ಶ್ರೀ ಎ ಎಸ್ ಶಿಂಧೆ ವಕೀಲರಿಂದ**

**1.** ಸುಮಾರು 6 ವರುಷದ ಹಿಂದೆ 3 ಮತ್ತು 4 ನೇ ಆರೋಪಿತರು ನನ್ನ ಅಂಗಡಿಗೆ ವಡಾಪೊನ ಸಿಮ್ ಖರೀದಿಸಲು ಬಂದಿದ್ದು ಹಾಗೂ ಸೂಕ್ತ

**ಚಾಸಾ-11**

**ಪ್ರಾಸಾ-9**

ದಾಖಲೆಗಳನ್ನು ಪಡೆದುಕೊಂಡು ಅವರಿಗೆ ಸಿಮ್ ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪೋಲಿಸರು 15 ದಿನದ ನಂತರ ನನ್ನ ಅಂಗಡಿಗೆ ಬಂದು ದಾಖಲೆ ಪಡೆದರು ಎಂದರೆ ಸರಿಯಲ್ಲ. ಅದೇ ರೀತಿ ಪೋಲಿಸರು ನನಗೆ ಆರೋಪಿತರು ಸದರಿ ಸಿಮ್ ಬಳಸಿ ದುರುಪಯೊಗ ಪಡೆದುಕೊಂಡು ಬಗ್ಗೆ ಹೇಳಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ .**

**(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ)**

4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಧಾರವಾಡ.

**ಸಿಸಿ ನಂ.1717/2021**

**ಚಾಸಾ-11**

**ಪ್ರಾಸಾ-9**